# ಜನಪದ ರಂಗಭೂಮಿಯಲ್ಲಿ ಪುರಾಣ ಕಥಾನಕಗಳು: ಮರು ಚಿಂತನೆ



ಡಿ.ಎಸ್. ಚೌಗಲೆ

'ಬಯಲಾಟ' ಪದವು ಬಯಲಿನಲ್ಲಿ ಅಟ್ಟ ನಿರ್ಮಿಸಿ ಆಡುವ ಆಟ ಎಂಬ ಸಾಮಾನ್ಯ ಅರ್ಥದಲ್ಲಿ ಹೇಳುವುದು ರೂಢಿ ಮತ್ತು ಉಚಿತವು ಹೌದು. ಬಯಲು (Open space) ) ಆಟ (Play) ಎಂಬುದರ ಸಂಯುಕ್ತ ಪದ. A dance, acting or stage performance, a show ಎಂದರೆ ಕುಣಿತ, ಅಭಿನಯ, ರಂಗಪ್ರಯೋಗ ಎನ್ನುವ ಅರ್ಥಗಳು ದ್ರಾವಿಡ ಕುಲದ ಎಲ್ಲ ಭಾಷೆಗಳಲ್ಲೂ ಇವೆ. ಜಾತ್ರೆ, ಉತ್ಸವ, ಆಚರಣೆ ಮುಂತಾದ ಸಂದರ್ಭಗಳಲ್ಲಿ ಕೂಡು ರಸ್ತೆ ಅಥವಾ ದೇಗುಲ, ಬಯಲಿನಲ್ಲಿ ಕಟ್ಟಿಗೆ ಹಲಗೆಗಳ ಅಟ್ಟ ಹಾಕಿಸಿ ಹಿಲಾಲು ಬೆಳಕಿನಲ್ಲಿ ಪ್ರಯೋಗಗೊಳ್ಳುತ್ತ ಬಂದ ಬಗೆ ಇದು. ಆಟ, ಬಯಲಾಟ, ದೊಡ್ಡಾಟ ಮತ್ತು ಸಣ್ಣಾಟ ಪದಗಳು ಉತ್ತರ ಕರ್ನಾಟಕದ ಜಾನಪದ ದೃಶ್ಯ ಪರಂಪರೆಯ ನಾಲ್ಕು ಘಟ್ಟಗಳು. ಇದರಲ್ಲಿ ಮೂಡಲಪಾಯ ಮತ್ತು ಪಡುವಲಪಾಯ ಎಂಬ ಪ್ರಾಂತ್ಯ ವರ್ಗೀಕರಣವೂ ಉಂಟು. ಮೂಡಲಪಾಯ ದೊಡ್ಡಾಟವಾದರೆ, ಪಡುವಲಪಾಯ ಯಕ್ಷಗಾನದ ರೂಪಗಳನ್ನು ಹೇಳುತ್ತದೆ.

ಬಯಲಾಟದ ದೊಡ್ಡಾಟಗಳಿಗೆ ರಾಮಾಯಣ, ಮಹಾಭಾರತ, ಶೈವ, ವೈಷ್ಣವ ಪುರಾಣಗಳ ಕಥಾನಕಗಳೇ ಪ್ರೇರಣೆ. ಇವು ಶಿಷ್ಟ ಸಂಸ್ಕೃತಿಯ ಜೊತೆಗೆ ಪ್ಯಾರಲಲ್ ಆಗಿ 'ತೋಂಡಿ' ಸಂಸ್ಕೃತಿಯ ಮೂಲಕ ಜಾನಪದ ಬದುಕಿನ ಧೋರಣೆಗಳನ್ನು ಕಟ್ಟಿಕೊಡುತ್ತ ಬಂದಿವೆ. ಪುರಾಣದೊಟ್ಟಿಗೆ ಜಾನಪದ ಕಥನ ಮೂಲವನ್ನು ಇವು ಪಡೆದಿವೆ. ಪುರಾಣಗಳ ಕಥೆಯನ್ನು ಹೇಳುತ್ತ ಜಾನಪದ ಕಲಾವಿದ ತನ್ನ ಸಮಯ ಪ್ರಜ್ಞೆಯಿಂದ, ಬುದ್ಧಿಮತ್ತೆಯಿಂದ ಪುರಾಣಕ್ಕಿರುವ ಸಾಧ್ಯತೆಯನ್ನು ಸಮಕಾಲೀನಕ್ಕೆ ವಿಸ್ತರಿಸುತ್ತಾನೆ. ಜಾನಪದ ಪ್ರೇಕ್ಷಕರ ಗ್ರಹಿಕೆಯನ್ನು ಅರ್ಥೈಸಿಕೊಂಡ ಕಲಾವಿದ ಸಮಕಾಲೀನ ರಾಜಕಾರಣ, ಸಮಾಜಕಾರಣ ಮತ್ತು ಧರ್ಮಕಾರಣಗಳ ಕುರಿತು ತನ್ನ ಆಶುರೂಪದ ಚಿಂತನೆಗಳನ್ನು ಸಹ ಕಟ್ಟಿಕೊಡುತ್ತಾನೆ. ಒಮ್ಮೊಮ್ಮೆ ಸಹಜತೆಯಿಂದ ಅಸಹಜ ಅರ್ಥ ಮೂಲಕ ಈ ಫಾರ್ಮ್ ಅನ್ನು ದುಡಿಸಿಕೊಳ್ಳುತ್ತಾರೆ.

ದೊಡ್ಡಾಟ, ಸಣ್ಣಾಟಗಳ ಕಲಾವಿದರಿಗೆ 'ಮಿಥ್'ನ ಭಾಷೆ, ಸ್ವರೂಪ, ಕಥೆಗಳ ಅರಿವು, ಆಳವಾದ ಚಿಂತನೆಯನ್ನು ಅಭಿವ್ಯಕ್ತಿಸುವಿಕೆ ಕರಗತವಾಗಿರುತ್ತದೆ. ಆಯಾ ಕಾಲದ ಸ್ವರೂಪ, ಮೌಲ್ಯ, ಮನೋಭಾವಕ್ಕೆ ಕಥೆ ಹೇಳುವುದನ್ನು ರೂಢಿಸಿಕೊಂಡಿದ್ದಾರೆ. ಪ್ರದೇಶಗಳಿಗೆ ಅನುಗುಣವಾಗಿ ಯಾವ ಮುಚ್ಚು ಮರೆಯಿಲ್ಲದೆ ಸಮಾಜದ ರೀತಿ ನೀತಿಗಳನ್ನು ಜಾಲಾಡಿ ವಿಮರ್ಶಿಸುತ್ತಾರೆ.